**ದಿನಾಂಕ: 09.06.2022 ರಂದು ಬೆಳಗ್ಗೆ 10.30 ಗಂಟೆಗೆ ಕೊಠಡಿ ಸಂಖ್ಯೆ 318, ವಿಕಾಸಸೌಧದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ವೃತ್ತಿ/ ಕೆಲಸ ನಿಷೇಧ ಮತ್ತು ಪುನರ್ವಸತಿ ಕಾಯ್ದೆ 2013ರ ಸೆಕ್ಷನ್ 26 ಅನ್ವಯ ರಚಿಸಿರುವ ರಾಜ್ಯ ಮೇಲ್ವಿಚಾರಣಾ ಸಮಿತಿಯ 5ನೇ ಸಭೆಯ ನಡವಳಿ.**

**ಸಭೆಯಲ್ಲಿ ಹಾಜರಿದ್ದವರು:**

| | | |
|---|---|---|
| 1. | **ಶ್ರೀ. ಕೋಟಾ ಶ್ರೀನಿವಾಸ ಪೂಜಾರಿ**, ಅಧ್ಯಕ್ಷರು ಹಾಗೂ ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. | ಅಧ್ಯಕ್ಷರು |
| 2. | **ಶ್ರೀ ಎಂ. ಶಿವಣ್ಣ (ಕೋಟೆ)**, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು. | ಸದಸ್ಯರು |
| 3. | **ಶ್ರೀ. ಹೆಚ್. ಹನುಮಂತಪ್ಪ**, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಬೆಂಗಳೂರು. | ಸದಸ್ಯರು |
| 4. | ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ. | ಸದಸ್ಯ ಕಾರ್ಯದರ್ಶಿಗಳು |
| 5. | **ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು**, ಪೊಲೀಸ್ ಇಲಾಖೆ, ಬೆಂಗಳೂರುರವರ ಪರವಾಗಿ **ಶ್ರೀ ನಾಗರಾಜು.ಎಸ್**, DSP PRC | ಸದಸ್ಯರು |
| 6. | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ಗೃಹ ಇಲಾಖೆ (ಒಳಾಡಳಿತ ಇಲಾಖೆ). ಪರವಾಗಿ **ಶ್ರೀ.ಬಿ.ಎಸ್.ನಾಗರತ್ನಮ್ಮ, ಉಪ ಕಾರ್ಯದರ್ಶಿ.** | ಸದಸ್ಯರು |
| 7. | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಪರವಾಗಿ **ಆಯುಕ್ತರು, ಪಂಚಾಯತ್ ರಾಜ್ ಇಲಾಖೆ** | ಸದಸ್ಯರು |
| 8. | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ಮಹಿಳಾ&ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ರವರ ಪರವಾಗಿ **ಅಧೀನ ಕಾರ್ಯದರ್ಶಿ**, | ಸದಸ್ಯರು |
| 9. | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ಕಾರ್ಮಿಕ ಇಲಾಖೆ. ಬೆಂಗಳೂರು ರವರ ಪರವಾಗಿ **ಉಪ ಕಾರ್ಮಿಕ ಆಯುಕ್ತರು, Reginal-1** | ಸದಸ್ಯರು |
| 10. | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ಆರ್ಥಿಕ ಇಲಾಖೆ. | ಸದಸ್ಯರು |
| 11. | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಕಂದಾಯ ಇಲಾಖೆ. ಬೆಂಗಳೂರುರವರ ಪರವಾಗಿ **ಜಂಟಿ ನಿರ್ದೇಶಕರು, DSSP** | ಸದಸ್ಯರು |
| 12. | **ಮುಖ್ಯ ಆಯುಕ್ತರು**, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಬೆಂಗಳೂರು ರವರ ಪರವಾಗಿ **ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ.** | ಸದಸ್ಯರು |
| 13. | **ಡಿವಿಜನಲ್ ಜನರಲ್ ಮ್ಯಾನೇಜರ್**, ಡಿವಿಜನಲ್ ಸೆಂಟ್ರಲ್ ಆಫೀಸ್, ಸೌತ್ ವೆಸ್ಟ್ರನ್ ರೈಲ್ವೆ. ಪರವಾಗಿ CHI / ENHM | ಸದಸ್ಯರು |
| 14. | **ನಿರ್ದೇಶಕರು,** ಪೌರಾಡಳಿತ ಇಲಾಖೆ. ಬೆಂಗಳೂರುರವರ ಪರವಾಗಿ **ಜಂಟಿ ನಿರ್ದೇಶಕರು,** ಪೌರಾಡಳಿತ ನಿರ್ದೇಶನಾಲಯ. | ಸದಸ್ಯರು |

| | | |
|---|---|---|
| 15. | **ಅಧ್ಯಕ್ಷರು,** ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. ಬೆಂಗಳೂರುರವರ ಪರವಾಗಿ **ಶ್ರೀ ಸುರೇಶ್.ಬಿ, ಮುಖ್ಯ ಅಭಿಯಂತರರು** | ಸದಸ್ಯರು |
| 16. | **ಆಯುಕ್ತರು,** ಸಮಾಜ ಕಲ್ಯಾಣ ಇಲಾಖೆ. ಬೆಂಗಳೂರು. | ಸದಸ್ಯರು |
| 17. | **ವ್ಯವಸ್ಥಾಪಕ ನಿರ್ದೇಶಕರು,** ರಾಜೀವ್ ಗಾಂಧಿ ವಸತಿ ಇಲಾಖೆ, ಬೆಂಗಳೂರು | ಸದಸ್ಯರು |
| 18. | **ಆಯುಕ್ತರು/ನಿರ್ದೇಶಕರು,** ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ. | ಸದಸ್ಯರು |
| 19. | **ಕಾರ್ಯದರ್ಶಿ,** ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು | ಸದಸ್ಯರು |
| 20. | **ವ್ಯವಸ್ಥಾಪಕ ನಿರ್ದೇಶಕರು,** ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ. | ಸದಸ್ಯರು |
| 21. | **ಕಾರ್ಯದರ್ಶಿ,** ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ. ಬೆಂಗಳೂರು ಪರವಾಗಿ ಆಪ್ತ ಕಾರ್ಯದರ್ಶಿ, | ಸದಸ್ಯರು |
| 22. | **ಸಂಚಾಲಕರು,** ರಾಜ್ಯಮಟ್ಟದ ಬ್ಯಾಂಕುಗಳ ಸಮಿತಿ. ಬೆಂಗಳೂರು. | ಸದಸ್ಯರು |
| 23. | **ನಿರ್ದೇಶಕರು,** ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು | ಸದಸ್ಯರು |
| 24. | **ಶ್ರೀಮತಿ. ಗೀತಾ ರಾಜು ವಾಡೇಕರ್,** ಸದಸ್ಯರು. | ನಾಮ ನಿರ್ದೇಶಿತ ಸದಸ್ಯರು |
| 25. | **ಶ್ರೀಮತಿ. ಬೇಬಿ ಲಂಕೆಪ್ಪ ಮೇತ್ರಿ,** ಸದಸ್ಯರು. | ನಾಮ ನಿರ್ದೇಶಿತ ಸದಸ್ಯರು |
| 26. | **ಶ್ರೀ ಸುದರ್ಶನ್ ಕುಮಾರ್**, ಸರ್ಕಾರದ ಉಪ ಕಾರ್ಯದರ್ಶಿ (ಕಲ್ಯಾಣ), ಆರ್ಥಿಕ ಇಲಾಖೆ, ಬೆಂಗಳೂರು | |
| 27. | **ಶ್ರೀ ಬಸವರಾಜ್ ಆರ್ ಕಬಾಡೆ,** ಮುಖ್ಯ ಅಭಿಯಂತರರು (SWM), ಬಿಬಿಎಂಪಿ, ಬೆಂಗಳೂರು | |
| 28. | **ಶ್ರೀ ತುಕಾರಾಮ ಕಲ್ಯಾಣಕರ,** ಸರ್ಕಾರದ ಉಪ ಕಾರ್ಯದರ್ಶಿ, ನಅಇ (ಬಿಬಿಎಂಪಿ), ಬೆಂಗಳೂರು | |
| 29. | **ಅಧೀಕ್ಷಕ ಅಭಿಯಂತರರು,** ಕ.ನ.ನೀ ಸ ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು | |
| 30. | **ಉಪ ನಿರ್ದೇಶಕರು,** ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು | |
| 31. | **ಶ್ರೀ ನಾಗೇಶ್,** ಜಂಟಿ ನಿರ್ದೇಶಕರು (ಆಡಳಿತ) Department Industries Training & Employment | |
| 32. | **ಶ್ರೀ ಲಿಂಗಯ್ಯ,** ಕಲ್ಯಾಣ ಅಧಿಕಾರಿ, ಆರ್.ಆರ್.ನಗರ, ಬಿಬಿಎಂಪಿ, ಬೆಂಗಳೂರು | |
| 33. | **ಸರ್ಕಾರದ ಉಪ ಕಾರ್ಯದರ್ಶಿ–3(ಪ್ರ),** ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | |

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಕಾರ್ಯದರ್ಶಿರವರು, ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಸದಸ್ಯರು, ಅಧಿಕಾರಿಗಳನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ಸಫಾಯಿ ಕರ್ಮಚಾರಿ ಆಯೋಗದ ಪರವಾಗಿ ಸಭೆಗೆ ಆಹ್ವಾನಿಸಿ, ಮಾನ್ಯ ಅಧ್ಯಕ್ಷರ ಅನುಮತಿಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**ವಿಷಯ 1:** ದಿನಾಂಕ: 07-09-2021 ರಲ್ಲಿ ನಡೆದ ನಡವಳಿಯಲ್ಲಿನ ಪ್ರಮುಖ ವಿಷಯಗಳು ಇಂದಿನ ಸಭೆಯ ವಿಷಯಗಳಲ್ಲಿ ಒಳಗೊಂಡಿರುವುದರಿಂದ ವಿಷಯ ಸೂಚಿಗಳಂತೆ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ವಿವರ ಈ ಕೆಳಕಂಡಂತಿರುತ್ತದೆ.

**ವಿಷಯ-2 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ:**

ರಾಜ್ಯದ 30 ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದ್ದು, ಮೊದಲನೆ ಹಂತದಲ್ಲಿ 12 ಜಿಲ್ಲೆಗಳಲ್ಲಿ 5080 ಮ್ಯಾನುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಸ್ವಚ್ಛತಾ ಆಪ್‌ನಲ್ಲಿ 2927 ಅರ್ಜಿಗಳಿಗೆ ಅನುಮೋದನೆ ನೀಡಲಾಗಿದ್ದು, ಸದರಿ 2927 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ರೂ.40,000/-ರಂತೆ ಒಂದು ಬಾರಿ ನಗದು ಸಹಾಯ(OTCA) ಪಾವತಿಸಲಾಗಿರುತ್ತದೆ. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಕಾರ್ಯನಿರ್ವಹಿಸುತ್ತಿರುವ ಭಾವಚಿತ್ರ (live picture) ಅಪ್‌ಲೋಡ್ ಮಾಡಬೇಕಾಗಿರುವುದು ಕಡ್ಡಾಯ ಎಂಬ ಕಾರಣಕ್ಕಾಗಿ 2153 ಅರ್ಜಿಗಳಿಗೆ ಅನುಮೋದನೆ ಮಾಡದೆ ಹಾಗೆಯೇ ಆಪ್‌ನಲ್ಲಿ ಕೇಂದ್ರ ಸರ್ಕಾರ ಬಾಕಿ ಉಳಿಸಲಾಗಿರುತ್ತದೆ. ಎರಡನೇ ಹಂತದಲ್ಲಿ 18 ಜಿಲ್ಲೆಗಳಲ್ಲಿ 1586 ಮ್ಯಾನುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿರುತ್ತದೆ. 1586 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ರಾಜ್ಯ ಸರ್ವೆ ಸಮಿತಿಯಲ್ಲಿ ಅನುಮೋದನೆ ಪಡೆಯಬೇಕಾಗಿರುತ್ತದೆ. ತದನಂತರ ಸಮಿತಿಯ ಸಭೆಯ ನಿರ್ಣಯದಂತೆ ಸ್ವಚ್ಛತಾ ಆಪ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ ಎಂದು ಸಭೆಗೆ ಆಯೋಗದ ಕಾರ್ಯದರ್ಶಿಗಳು ವಿವರಿಸಲಾಯಿತು.

ಎಸ್.ಸಿ.ಎಸ್.ಪಿ ನೋಡೆಲ್ ಏಜೆನ್ಸಿ ಸಲಹೆಗಾರರು, ಹಾಲಿ ಗುರುತಿಸಿರುವಂತಹ ಮ್ಯಾನ್ಯುಯಲ್ ಸ್ಕ್ಯಾವೆಂಜ್‌ರ್‌ಗಳು ಕಾರ್ಯನಿರ್ವಹಿಸುತ್ತಿದ್ದಂತಹ ಫೋಟೋಗಳನ್ನು ಅಪ್‌ಲೋಡ್ ಮಾಡಲು ಕೇಂದ್ರ ಸರ್ಕಾರದ ಸ್ವಚ್ಛತಾ ಆಪ್‌ನಲ್ಲಿ ನಿರ್ದೇಶನವಿರುವುದರಿಂದ ಹಾಲಿ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು 2013ರಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಿಷೇದವಾದ ನಂತರ ಇವರು ಗುರುತಿಸಿಕೊಂಡಿರುವುದಿಲ್ಲ. ರಾಜ್ಯದಲ್ಲಿ ಈ ಕಾಯ್ದೆಯ ಬಗ್ಗೆ ಅರಿವು ಮೂಡಿಸುತ್ತಿರುವ ಹಿನ್ನೆಲೆಯಲ್ಲಿ ಸ್ವತ: ಕಾರ್ಮಿಕರು ಸೆಕ್ಷನ್ 12 ರ ಪ್ರಕಾರ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಈ ಅರ್ಜಿಗಳನ್ನು ಕಾನೂನಿನ ಪ್ರಕಾರ ಜಿಲ್ಲಾ ಸಮೀಕ್ಷಾ ಸಮಿತಿಯ ಸದಸ್ಯರು ಸ್ಥಳ ಮಹಜರ್‌ನ್ನು ಸಹ ನಡೆಸಿರುತ್ತಾರೆ. ತದನಂತರ ಜಿಲ್ಲಾ ಸಮೀಕ್ಷಾ ಸಮಿತಿಯು ಅನುಮೋದಿಸಿ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಿಸಿದ ಪಟ್ಟಿಯನ್ನು ರಾಜ್ಯ ಸಮೀಕ್ಷಾ ಸಮಿತಿಗೆ ಕಳುಹಿಸಲಾಗುತ್ತದೆ. ಈ ರೀತಿಯಾಗಿ ಕಾಯ್ದೆಯಲ್ಲಿರುವ ಎಲ್ಲಾ ನಿಯಮಗಳನ್ನು ಅನುಸರಿಸಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು, ಸ್ಕ್ಯಾವೆಂಜಿಂಗ್ ನಡೆಯುತ್ತಿರುವ ಬಗ್ಗೆ ಫೋಟೋ ಇಲ್ಲ ಎಂಬ ಕಾರಣಕ್ಕೆ ಪರಿಗಣಿಸಿರುವುದಿಲ್ಲ ಎಂದು ತಿಳಿಸಿದರು.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಾತನಾಡುತ್ತಾ, ಸ್ವಯಂ ಪ್ರೇರಿತವಾಗಿ ಮತ್ತು ಜಿಲ್ಲಾಧಿಕಾರಿಗಳಿಂದ ಪೇಪರ್ ನೋಟಿಫಿಕೇಷನ್ ಕರೆದು ಅರ್ಜಿಗಳನ್ನು ಪಡೆಯಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಎನ್.ಜಿ.ಒ ಕ್ಯಾಂಪ್ ಅಧಿಕಾರಿಗಳಿಂದ ಒಂದು ತಂಡ ರಚಿಸಿ ಸ್ವೀಕೃತ ಅರ್ಜಿಗಳಿಗೆ ಪರಿಶೀಲನೆ ಮಾಡಿ ತಕ್ಷಣ ದಾಖಲಾತಿ ಸಂಗ್ರಹಣೆ ಮಾಡಲಾಗಿರುತ್ತದೆ ಎಂದು ಅರ್ಜಿ ಪ್ರಕ್ರಿಯೆಯನ್ನು ವಿವರಿಸಿದರು.

ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ರವರು ಮಾತನಾಡುತ್ತಾ, 2019 ರಲ್ಲಿ ಫೋಟೋ ಕಡ್ಡಾಯವಾಗಿರಲಿಲ್ಲ, ನಂತರದಲ್ಲಿ ಫೋಟೋ ಕಡ್ಡಾಯವಾಗಿರುತ್ತದೆ. ಜಿಲ್ಲಾಧಿಕಾರಿಗಳಿಂದ ಅನುಮೋದನೆಗೊಂಡ ಅರ್ಜಿಗಳು ರಾಜ್ಯ ಮಟ್ಟಕ್ಕೆ ಬಂದಿದ್ದು, ಕೇಂದ್ರ ಸರ್ಕಾರವು ನಿಗಧಿಪಡಿಸಿದ ಸಮಯದಲ್ಲಿ ಎಲ್ಲಾ ಇಲಾಖಾ ಅಧಿಕಾರಿಗಳು ಅರ್ಜಿಗಳನ್ನು ಅಪ್‌ಲೋಡ್ ಮಾಡಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಕೊನೆಯ ದಿನಾಂಕದ ನಂತರ ಕೇಂದ್ರ ಸರ್ಕಾರದಿಂದ ಅನುಮೋದನೆ ಮಾಡಲು ಅವಕಾಶ ಇರುವುದಿಲ್ಲ ಎಂದು ತಿಳಿಸಿದರು.

18 ಜಿಲ್ಲೆಗಳಿಂದ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಆಯೋಗದಿಂದ ಪಡೆಯಲಾಗಿರುತ್ತದೆ. ಆದರೆ ಗ್ರಾಮೀಣ ಪಂಚಾಯತ್ ರಾಜ್ ಇಲಾಖೆಯಿಂದ, ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದು ತಾವು ಗುರುತಿಸಿರುವಂತಹ ಹಾಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕೆಲಸ ನಿರ್ವಹಿಸುವ ಕಾರ್ಮಿಕರೇ ಆಗಿದ್ದಲ್ಲಿ ತಮ್ಮ ಜಿಲ್ಲೆಯ ಇನ್‌ಸ್ಯಾನಿಟರಿ ಲ್ಯಾಟರಿನ್‌ಗಳ ಫೋಟೋ ಪ್ರತಿಯೊಂದಿಗೆ ವರದಿಯನ್ನು ನೀಡಲು ದಿ:06-06-2022 ರಂದು ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುತ್ತಾರೆ. ಇದರಿಂದಾಗಿ ಜಿಲ್ಲಾ ಸರ್ವೆ ಸಮಿತಿಯು ಶೂನ್ಯ ಎಂಬ ವರದಿಯನ್ನು ಸಲ್ಲಿಸಿರುತ್ತಾರೆ.

ಮಾನ್ಯ ಸಚಿವರು ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಹಾಲಿ ಗುರುತಿಸಿರುವ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಇಲಾಖೆಗಳು ಪರಿಗಣಿಸುವುದು. ಬಳ್ಳಾರಿ, ಬೆಳಗಾವಿ ಕೆಲವು ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಯಾರು ಇಲ್ಲವೆಂದು ಶೂನ್ಯ ಮಾಹಿತಿ ಸಲ್ಲಿಸಿರುತ್ತಾರೆ, ಆದ್ದರಿಂದ ಜಿಲ್ಲಾಧಿಕಾರಿಗಳ ಮಾಹಿತಿಯನ್ನು ಪರಿಗಣಿಸುವುದೇ ಅಥವಾ ಇಲಾಖೆಯು ಸಲ್ಲಿಸಿರುವ ಮಾಹಿತಿಯನ್ನು ಪರಿಗಣಿಸುವುದೇ ಎಂಬ ಬಗ್ಗೆ ಚರ್ಚೆ ನಡೆದು, ಅಧಿಕಾರಿಗಳು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಇದ್ದಾರೆ ಎಂದು ತಿಳಿಸಿದರೆ ನಮ್ಮ ಮೇಲೆ ಕ್ರಮ ಕೈಗೊಳ್ಳಬಹುದು ಎಂಬ ಉದ್ದೇಶದಿಂದ ಶೂನ್ಯ ಮಾಹಿತಿ ನೀಡುತ್ತಿರಬಹುದು. ಇದರಿಂದ ನೈಜವಾದ ಅರ್ಹ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸರ್ಕಾರದ ಸೌಲಭ್ಯ ಒದಗಿಸಲು ಸಾಧ್ಯವಾಗುವುದಿಲ್ಲ. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅಂಕಿ ಅಂಶದ ಸ್ಪಷ್ಟತೆ ಇರಬೇಕು. ಕೆಳ ವರ್ಗದ ಬಡ ಜನರಿಗೆ ಪುನರ್ವಸತಿ, ಆರ್ಥಿಕ ನೆರವು, ಯಂತ್ರ ಕೊಡುವುದು, ತುರ್ತಾದ ಪರಿಹಾರ ಕೊಡುವ ಉದ್ದೇಶವಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟು, ನಿಖರವಾದ ಅಂಕಿ ಅಂಶ ಸಂಗ್ರಹಿಸಲು ತಿಳಿಸಬೇಕಾಗಿರುತ್ತದೆ. 2143 ಮತ್ತು 1586 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿ ನೀಡಬೇಕಾಗಿರುತ್ತದೆ. ಆದ್ದರಿಂದ ಮುಂದಿನ ವಾರದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳೊಂದಿಗೆ **ವಿಡಿಯೋ ಕಾನ್ಫರೆನ್ಸನ್ನು ನಡೆಸಲು** ಕ್ರಮ ವಹಿಸಲು ಸೂಚಿಸಿದರು.

ಮುಂದುವರೆದು, 2143 ಬಾಕಿ ಅರ್ಜಿಗಳಿಗೆ ಪರಿಹಾರ ಪುನರ್ವಸತಿ ಕಲ್ಪಿಸುವ ಬಗ್ಗೆ ಚರ್ಚಿಸಿ, ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಇದರಿಂದ ಅನ್ಯಾಯವಾಗುವುದಾಗಿ ತಿಳಿಸಿ ಅವರಿಗೆ ಪುನರ್ವಸತಿ ಕಲ್ಪಿಸಲು ರಾಜ್ಯ ಸರ್ಕಾರದಿಂದ ಒಂದು ಪ್ರಯತ್ನ ಮಾಡಿ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ರವರು ಕೇಂದ್ರ ಸಚಿವರು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಕೇಂದ್ರ ಸರ್ಕಾರದ ಮಂತ್ರಾಲಯ, ನವದೆಹಲಿ **ಸಚಿವರು ಮತ್ತು ರಾಜ್ಯ/ಕೇಂದ್ರದ ಅಧಿಕಾರಿಗಳೊಂದಿಗೆ ಸಭೆ** ಕರೆದು ಪೋಟೋ ಅಪ್‌ಲೋಡ್ ಮಾಡುವುದರಿಂದ ವಿನಾಯಿತಿ ಪಡೆದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಅರ್ಜಿಗಳನ್ನು ಅನುಮೋದನೆ ಪಡೆಯಲು ಕ್ರಮವಹಿಸಬಹುದಾಗಿರುತ್ತದೆ ಎಂದು ತಿಳಿಸಿದರು.

ಗ್ರಾಮೀಣ ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ತುಮಕೂರು ಜಿಲ್ಲೆಯಿಂದ 87 ಜನ ಎಂದು ಹಿಂದೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿ ನೀಡಲಾಗಿದೆ. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು 339 ಜನ ಎಂದು ವರದಿಸಿರುತ್ತಾರೆ. ಈ ಕುರಿತು ಚರ್ಚಿಸಲಾಗಿ ತುಮಕೂರು ಜಿಲ್ಲಾಧಿಕಾರಿಗಳು ಒಂದು ವಾರದಲ್ಲಿ ಸಭೆ ಕರೆದು ನಿಖರವಾದ ಅಂಕಿ ಅಂಶ ನೀಡುವುದಾಗಿ ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರು ಇನ್‌ಸ್ಯಾನಿಟರಿ ಲ್ಯಾಟರಿನ್‌ಗಳ ಸಂಖ್ಯೆಯಿಂದಲೂ ಸಹ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಬಹುದಾಗಿರುತ್ತದೆ, ಏಕೆಂದರೆ ಬಹುತೇಕ ಇನ್‌ಸ್ಯಾನಿಟರಿ ಲ್ಯಾಟರಿನ್‌ಗಳು ಯು.ಜಿ.ಡಿಗೆ ಸಂಪರ್ಕ ಮಾಡಿರುವುದಿಲ್ಲ. ಅಲ್ಲದೆ ಸ್ವಚ್ಛ ಭಾರತ್ ಮಿಷನ್‌ನಲ್ಲಿ ಸಿಂಗಲ್ ಪಿಟ್ ಮಾಡಿದ್ದಾರೆ ಮತ್ತು ಸಕ್ಕಿಂಗ್ ಮಿಷನ್ ಕ್ಲೀನ್ ಮಾಡುವವರು ಎಷ್ಟು ಜನರೆಂದು ಅಂಕಿ ಅಂಶಗಳಿಂದ ಕೂಡ ಈ ವರ್ಗದ ಜನರನ್ನು ಗುರುತಿಸಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು, ಕೇಂದ್ರ ಸಚಿವರು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಕೇಂದ್ರ ಸರ್ಕಾರದ ಮಂತ್ರಾಲಯ, ನವದೆಹಲಿರವರು, ರಾಜ್ಯ ಮತ್ತು ಕೇಂದ್ರದ ಅಧಿಕಾರಿಗಳೊಂದಿಗೆ ಸಭೆ ನಿಗಧಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರು ಕ್ರಮವಹಿಸಲು ಸೂಚಿಸಿದರು.

**ತೀರ್ಮಾನ:**

1. ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸನ್ನು ನಡೆಸುವುದು.
2. ಕೇಂದ್ರ ಸಚಿವರು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಕೇಂದ್ರ ಸರ್ಕಾರದ ಮಂತ್ರಾಲಯ, ನವದೆಹಲಿರವರು ರಾಜ್ಯ/ಕೇಂದ್ರದ ಅಧಿಕಾರಿಗಳೊಂದಿಗೆ ಸಭೆ ನಿಗಧಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

**ವಿಷಯ 3 & 6 – ಪುನರ್ವಸತಿ ಮತ್ತು ವಸತಿ ಸೌಲಭ್ಯ:**

ಮಾನ್ಯ ಅಧ್ಯಕ್ಷರು, ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ರವರು ಮಾತನಾಡಿ ನಿಗಮದಿಂದ 2020-21 ನೇ ಸಾಲಿಗೆ 1200 ಜನರಿಗೆ ಐರಾವತ, ಸ್ವಯಂ ಉದ್ಯೋಗ ಯೋಜನೆ ಹಾಗೂ ನೇರ ಸಾಲ ಯೋಜನೆಯಡಿ ಸಾಲ ಸೌಲಭ್ಯ ನೀಡುವುದರ ಮೂಲಕ ಪುನರ್ವಸತಿ ಕಲ್ಪಿಸಲಾಗಿದೆ. ಎನ್.ಎಸ್.ಕೆ.ಎಫ್.ಡಿ.ಸಿ ಯಿಂದ 208 ಜನರಿಗೆ ಸಬ್ಸಿಡಿ ಸಾಲ ಸೌಲಭ್ಯ ನೀಡಲಾಗಿದೆ. ಪ್ರಸ್ತುತ 500 ಜನರಿಗೆ ರೂ. 6.25 ಲಕ್ಷ ಸಾಲ ರೂ.3.75 ಲಕ್ಷ ಸಹಾಯಧನ ರಂತೆ ತಲಾ ರೂ.10.00 ಲಕ್ಷ ಸಾಲ ಮಂಜೂರು ಮಾಡಲು ಕ್ರಮವಹಿಸಲಾಗಿದೆ. ನಿಗಮದಿಂದ ರೂ.100.00 ಕೋಟಿ ಗ್ಯಾರಂಟಿಯನ್ನು ನೀಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿ ರೂ.25.00 ಕೋಟಿ ಗ್ಯಾರಂಟಿಯನ್ನು ನೀಡಿ, ಈಗ ನೀಡಿರುವ ರೂ.25.00 ಕೋಟಿ ಮರು ಪಾವತಿಯಾದ ನಂತರ ಉಳಿದ ಅನುದಾನವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿರುತ್ತಾರೆ ಎಂದು ಸಭೆಗೆ ವಿವರಿಸಿದರು.

ಈ ಬಗ್ಗೆ ಚರ್ಚೆ ನಡೆದು, ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಸಾಲದ ಮೊತ್ತವನ್ನು ಕೇಂದ್ರಕ್ಕೆ ಹಿಂದಿರುಗಿಸಬೇಕಾಗಿರುತ್ತದೆ. ಆದ್ದರಿಂದ ಸಬ್ಸಿಡಿ ಮೊತ್ತವನ್ನು ಶೇ.50% ಹೆಚ್ಚಿಸಲು ಅಧ್ಯಕ್ಷರು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ರವರು ಕೋರಿದರು.

ಬಿ.ಬಿ.ಎಂ.ಪಿ., ವಿಶೇಷ ಆಯುಕ್ತರು, (ಕಲ್ಯಾಣ) ರವರು ಮಾತಾನಾಡುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ 1625 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 124 ಜನರಿಗೆ ಮಾತ್ರ ಗುರುತಿನ ಚೀಟಿ ನೀಡಲಾಗಿದೆ. 2013 ರ ಸಮೀಕ್ಷೆಯಲ್ಲಿ 201 ಜನ ಗುರುತಿಸಲಾಗಿದ್ದು, ಅದರಲ್ಲಿ 124 ಜನರಿಗೆ ಗುರುತಿನ ಚೀಟಿ ನೀಡಲಾಗಿದೆ. 77 ಅರ್ಜಿಗಳಿಗೆ ಅಪೂರ್ಣ ಮಾಹಿತಿ ಇದ್ದು, ಪೂರ್ಣ ಮಾಹಿತಿ ಪಡೆದು ಗುರುತಿನ ಚೀಟಿ ವಿತರಿಸಲಾಗುವುದು. 2018 ರಲ್ಲಿ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ರವರ ನಿರ್ದೇಶನದಂತೆ ವಿಶೇಷ ಸಮೀಕ್ಷೆಯನ್ನು ಕೈಗೊಂಡು 1424 ಜನರನ್ನು ಗುರುತಿಸಲಾಗಿದ್ದು, ಈ ಪೈಕಿ 1188 ಜನರ ಅರ್ಜಿಯನ್ನು ಪೋರ್ಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. ಹಾಗೂ 1 ತಿಂಗಳ ಒಳಗಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಗುರುತಿಸಲ್ಪಟ್ಟಿರುವ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೂ ಗುರುತಿನ ಚೀಟಿ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರಾದ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಮಾತನಾಡಿ 1 ತಿಂಗಳಲ್ಲಿ 77 + 1424 ಅರ್ಜಿಗಳಿಗೂ ಗುರುತಿನ ಚೀಟಿ ನೀಡಲು ಹಾಗೂ ಗುರುತಿನ ಚೀಟಿ ವಿತರಿಸಲು ಏನಾದರೂ ತೊಂದರೆ ಇದ್ದರೆ, ಇಂದಿನ ಸಭೆಯ ನಂತರದ 2 ದಿನಗಳಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ತಿಳಿಸಲು ಸೂಚಿಸಿದರು. ಈ ಸೂಚನೆಯು ಎಲ್ಲಾ ಬಿ.ಬಿ.ಎಂ.ಪಿ., ಮಹಾನಗರ ಪಾಲಿಕೆ/ ನಗರಸಭೆ /ಪುರಸಭೆ /ಪಟ್ಟಣ ಪಂಚಾಯಿತಿ/ಗ್ರಾಮ ಪಂಚಾಯಿತಿ ರವರಿಗೂ ಅನ್ವಯವಾಗುತ್ತದೆ ಅದರನ್ವಯ ಬಿಬಿಎಂಪಿ ಮಾದರಿಯಂತೆ ಪೌರಾಡಳಿತ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಸಹ ಗುರುತಿನ ಚೀಟಿ ನೀಡಲು ಸೂಚಿಸಲಾಯಿತು.

ಮಾನ್ಯ ಸಭಾಧ್ಯಕ್ಷರಾದ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಎಸ್.ಸಿ./ಎಸ್.ಟಿ ಮೀಸಲು ಹಣ ಇದ್ದು 5 ಲಕ್ಷ ಮನೆ ನಿರ್ಮಾಣ ಮಾಡಲು ಕ್ರಮ ವಹಿಸುವುದು. ಈ ಕುರಿತು ಅಧಿಕಾರಿಗಳು ನಿರ್ಲಕ್ಷ್ಯತೆ ವಹಿಸಿದಲ್ಲಿ ಎಸ್.ಸಿ./ಎಸ್.ಟಿ ದೌರ್ಜನ್ಯ ಕಾಯ್ದೆ ಅನ್ವಯವಾಗುವುದಾಗಿ ಎಚ್ಚರಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ 2022 ಮ್ಯಾನುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1576 ಜನರಿಗೆ ಗುರುತಿನ ಚೀಟಿ ನೀಡಲಾಗಿರುತ್ತದೆ ಎಂದು ತಿಳಿಸಿದರು.

ಆಯೋಗದ ಅಧ್ಯಕ್ಷರು ರವರು ಮಾತನಾಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಪೌರಕಾರ್ಮಿಕರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳಲು ಎಸ್.ಎಸ್.ಎಲ್.ಸಿ ಮಾನದಂಡ ನಿಗಧಿಪಡಿಸಲಾಗಿರುತ್ತದೆ. 4000 ಜನರಿಗೆ ಒಬ್ಬ ಪೌರ ಕಾರ್ಮಿಕರಂತೆ ನೇಮಿಸಿಕೊಳ್ಳುತ್ತಿರುತ್ತಾರೆ. ಇ.ಎಸ್.ಐ, ಪಿ.ಎಫ್ ಹಾಗೂ ಯಾವುದೇ ಉದ್ಯೋಗ ಭದ್ರತೆ ಇರುವುದಿಲ್ಲ. ಪೌರಕಾರ್ಮಿಕರು ಮೃತಪಟ್ಟಲ್ಲಿ ಕುಟುಂಬದ ಅವಲಂಬಿತರು ಅನಾಥರಾಗಿರುತ್ತಾರೆ. ಸುಮಾರು 20-30 ತಿಂಗಳುಗಳ ಕಾಲ ಯಾವುದೇ ಕನಿಷ್ಟ ವೇತನವನ್ನೂ ಸಹ ಪಾವತಿಸಿರುವುದಿಲ್ಲ ಎಂದು ತಿಳಿಸಿದಾಗ, ಆಯುಕ್ತರು, ಪಂಚಾಯತ್ ರಾಜ್ ಇಲಾಖೆರವರು 7ನೇ ತರಗತಿ ನಿಗಧಿಗೊಳಿಸಲು ಕ್ರಮವಹಿಸಿರುವುದಾಗಿ ಸಭೆಗೆ ತಿಳಿಸಿದರು.

ಮುಂದುವರೆದು, ಗ್ರಾಮ ಪಂಚಾಯತ್‌ಗಳಲ್ಲಿ ಸ್ವಚ್ಚತಾ ಕಾರ್ಯಕ್ರಮದಲ್ಲಿ ಆಟೋ ಖರೀದಿ ಮಾಡಿ ಚಾಲಕರಿಗೆ ವೇತನ ನೀಡಲು ಅನುದಾನ ಇಲ್ಲ ಎಂಬ ಕಾರಣಕ್ಕೆ ಆಟೋಗಳನ್ನು ಚಲಾಯಿಸದೇ ಹಾಗೆಯೇ ನಿಲ್ಲಿಸಿರುತ್ತಾರೆ ಎಂದು ತಿಳಿಸಿದಾಗ, **ಆಯುಕ್ತರು,** ಪಂಚಾಯತ್ ರಾಜ್ ಇಲಾಖೆರವರು ಸ್ಥಳೀಯವಾಗಿ ಪರಿಹಾರ ಕಂಡುಕೊಂಡು ಮಾನದಂಡ ನಿಗಧಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಿ ಮನೆಗೆ ರೂ.10.00 ಅಥವಾ ರೂ.20.00ರಂತೆ ಶುಲ್ಕ ನಿಗಧಿಗೊಳಿಸಿ ವೇತನ ನೀಡಲು ಆದೇಶ ಹೊರಡಿಸಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ.ಗೀತಾ ರಾಜು ವಾಡೇಕರ್ ರವರು ರಾಯಚೂರು ಜಿಲ್ಲೆಯಲ್ಲಿ ನಗರ ಮತ್ತು ಗ್ರಾಮೀಣ ಭಾಗದಿಂದ 92 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿದ್ದು, ಗುರುತಿನ ಚೀಟಿ ನೀಡಿರುವುದಿಲ್ಲ ಎಂದು ತಿಳಿಸಿದಾಗ **ಆಯುಕ್ತರು,** ಪಂಚಾಯತ್ ರಾಜ್ ಇಲಾಖೆರವರು ಗ್ರಾಮೀಣದಲ್ಲಿ 86 ಜನರಲ್ಲಿ 72 ಜನರಿಗೆ ಗುರುತಿನ ಚೀಟಿ ನೀಡಲಾಗಿದೆ. 6 ಜನರು ಅನಿವಾಸಿಗಳಾಗಿರುವುದರಿಂದ 6 ಜನರ ಮಾಹಿತಿ ಅಪೂರ್ಣವಾಗಿರುತ್ತದೆಂದು ಉತ್ತರಿಸಿದರು.

ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ರವರು ಮಾತನಾಡುತ್ತಾ ಈಗಾಗಲೇ ಪೌರಾಡಳಿತ ನಿರ್ದೇಶನಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳವರು ನೀಡಿರುವ ಗುರುತಿಸಲ್ಪಟ್ಟ 2937 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ವಸತಿ ಹಂಚಿಕೆ ಮಾಡಲು ನಿಗಮಕ್ಕೆ ಸಲ್ಲಿಸಿರುತ್ತಾರೆ. ಪ್ರಸಕ್ತ ಸಾಲಿಗೆ 6 ಲಕ್ಷ ಮನೆಗಳನನು ಹಂಚಿಕೆ ಮಾಡಲು ಅನುಮೋದನೆಯಾಗಿದ್ದು ಈ ಪೈಕಿ 3355 ಮನೆಗಳನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರಿ ನಿಗಧಿಪಡಿಸಲಾಗಿರುತ್ತದೆ. ಈಗಾಗಲೇ ಸ್ವೀಕೃತವಾಗಿರುವ 2937 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೂ ಮನೆಗಳ ಹಂಚಿಕೆಗಾಗಿ ಸಂಬಂಧಿಸಿದ 17 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸಲಾಗಿದ್ದು ಅನುಮೋದನೆ ಪಡೆದ ನಂತರ 2937 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗು ಮನೆಗಳನ್ನು ವಿತರಿಸಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಘಟಕ ವೆಚ್ಚವನ್ನು ಪರಿಶೀಲಿಸಿ ವೈಯುಕ್ತಿಕವಾಗಿ ಮೇಲ್ವಿಚಾರಣೆ ಮಾಡಲು ಮಾನ್ಯ ಸಭಾಧ್ಯಕ್ಷರಾದ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ನಿಗಮದ ಅಧಿಕಾರಿಗಳಿಗೆ ಸೂಚಿಸಿದರು.

**ತೀರ್ಮಾನ:**

1. ಗುರುತಿಸಿರುವ ಎಲ್ಲಾ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್.ಕಾಯ್ದೆ 2013 ರ ಅನ್ವಯ ಒಂದು ತಿಂಗಳ ಒಳಗಾಗಿ ಗುರುತಿನ ಚೀಟಿಯನ್ನು ನೀಡಲು ಕ್ರಮವಹಿಸಿ ವರದಿ ಸಲ್ಲಿಸುವುದು.
2. ರಾಜೀವ್ ಗಾಂಧಿ ಅಭಿವೃದ್ಧಿ ನಿಗಮದಿಂದ ನಿಗದಿಪಡಿಸಿರುವ ಗುರಿಯಂತೆ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮನೆಗಳನ್ನು ಕಡ್ಡಾಯವಾಗಿ ಹಂಚಿಕೆ ಮಾಡಿ ಸಂಬಂಧಪಟ್ಟ ಇಲಾಖೆಗಳು 3 ತಿಂಗಳೊಳಗಾಗಿ ವರದಿ ಸಲ್ಲಿಸುವುದು.
3. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ನೇಮಕಾತಿಗಾಗಿ 10ನೇ ತರಗತಿ ಉತ್ತೀರ್ಣ ಮಾನದಂಡವನ್ನು ಮಾರ್ಪಡಿಸಿ, 7ನೇ ತರಗತಿ ನಿಗಧಿಪಡಿಸಿ ನೇಮಿಸಿಕೊಳ್ಳುವುದು.

4. ಮಾನ್ಯ ಐ.ಪಿ.ಡಿ ಸಾಲಪ್ಪನವರ ಮಾರ್ಗದರ್ಶಗಳನ್ವಯ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು 1000 ಕ್ಕೆ ಒಬ್ಬ ಪೌರಕಾರ್ಮಿಕರಂತೆ ಮಾನದಂಡವನ್ನು ನಿಗದಿಗೊಳಿಸಿ ಗ್ರಾಮೀಣ ಇಲಾಖೆಯಿಂದ ಆದೇಶ ಹೊರಡಿಸುವುದು.
5. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಈ ಕೂಡಲೇ ಇ.ಎಸ್.ಐ, ಪಿ.ಎಫ್ ಹಾಗೂ ಹೆಲ್ತ್ ಕಾರ್ಡನ್ನು ವಿತರಣೆ ಮಾಡಲು ಗ್ರಾಮೀಣ ಇಲಾಖೆಯಿಂದ ಆದೇಶ ಹೊರಡಿಸುವುದು.
6. ಗ್ರಾಮೀಣ ಪ್ರದೇಶದಲ್ಲಿ ಗುರುತಿಸಿರುವ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಿಗೆ ಪರ್ಯಾಯ ಉದ್ಯೋಗಕ್ಕಾಗಿ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಲ್ಲಿ ಭರ್ತಿ ಮಾಡಲು ಕ್ರಮವಹಿಸುವುದು.
7. ಕೇಂದ್ರ ಸರ್ಕಾರ ಅನುಮೋದಿಸಿರುವ ಕುಟುಂಬದ ಅವಲಂಬಿತರಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಪುರ್ನವಸತಿಯನ್ನು ಕಲ್ಪಿಸಲು ಕ್ರಮವಹಿಸುವುದು.
8. ರಾಜೀವ್ ಗಾಂಧಿ ವಸತಿ ನಿಗಮದಿಂದ ನಿಗಧಿಪಡಿಸಿರುವ 2937 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮನೆಗಳನ್ನು ಸಂಬಂಧಪಟ್ಟ ಇಲಾಖೆಗಳು ಖುದ್ದಾಗಿ ಅರ್ಜಿಗಳನ್ನು ಸ್ವೀಕರಿಸಿ ಘಟಕ ವೆಚ್ಚವನ್ನು ಡಾ:ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆಯಡಿ (ಗ್ರಾಮೀಣ – ರೂ.1.75 ಲಕ್ಷ, ನಗರ – ರೂ.3.75 ಲಕ್ಷ) ಇರುವಂತೆ ನಿಗಧಿಪಡಿಸಿ ಮನೆಗಳನ್ನು 2022-23 ನೇ ಸಾಲಿಗೆ ಪೂರ್ಣಗೊಳಿಸಲು ಕ್ರಮ ವಹಿಸುವುದು.

**(ಕ್ರಮ:- ಸರ್ಕಾರದ ಅಪರ ಮುಖ್ಯ/ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ/ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ)**

<u>ವಿಷಯ 4: ಸಾಫ್ಟ್‌ವೇರ್ ರೂಪಿಸುವುದು</u>: ರಾಜ್ಯದಲ್ಲಿ ಗುರುತಿಸಿರುವ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳ, ಪೌರಕಾರ್ಮಿಕರು/ಸ್ವಚ್ಛತಾ ಕಾರ್ಮಿಕರು ಮತ್ತು ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟವರ ಮಾಹಿತಿಯನ್ನು ಸಂಪೂರ್ಣ ವಿವರಗಳನ್ನು ಕ್ರೂಡೀಕರಿಸಿ ತಯಾರಿಸಿದ ಮಾಹಿತಿಯನ್ನು ಸಾಫ್ಟ್‌ವೇರ್‌ನಲ್ಲಿ ಅಳವಡಿಸುವ ಬಗ್ಗೆ.

ರಾಜ್ಯದಲ್ಲಿ ಗುರುತಿಸಿರುವ 6666 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ, ರಾಜ್ಯದ ಎಲ್ಲೆಡೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರು/ಸ್ವಚ್ಛತಾ ಕಾರ್ಮಿಕರು ಮತ್ತು ಮ್ಯಾನ್‌ಹೋಲ್‌ಗಳಲ್ಲಿ ಮೃತಪಟ್ಟವರ ಮಾಹಿತಿಗಳನ್ನು ಕ್ರೂಢೀಕರಿಸಿ ವಿವರವನ್ನು ಸಾಫ್ಟ್‌ವೇರ್‌ನಲ್ಲಿ ಅಳವಡಿಸಿದಾಗ ಸರ್ಕಾರದಿಂದ ಸಿಗುವ ಸೌಲಭ್ಯವನ್ನು ಸದರಿ ಎಲ್ಲಾ ಕಾರ್ಮಿಕರಿಗೂ ನೀಡಲು ಅನುಕೂಲಕರವಾಗಿರುತ್ತದೆ ಎಂದು ಆಯೋಗದ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು,

<u>ತೀರ್ಮಾನ:</u>

ಮಾನ್ಯ ಸಭಾಧ್ಯಕ್ಷರಾದ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಈ ಕೂಡಲೇ ಸಂಪೂರ್ಣ ಮಾಹಿತಿಯನ್ನು ಸಾಫ್ಟ್‌ವೇರ್‌ನಲ್ಲಿ ಅಳವಡಿಸಲು ಸಭೆಯಲ್ಲಿ ಅಂಗೀಕರಿಸಲಾಯಿತು.

**(ಕ್ರಮ:- ಸರ್ಕಾರದ ಅಪರ ಮುಖ್ಯ/ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ/ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ)**

**ವಿಷಯ: 5 ವಕೀಲರ ನೇಮಕ:** ರಾಜ್ಯದಲ್ಲಿ ಮ್ಯಾನ್‌ಹೋಲ್/ ಸೆಪ್ಟಿಕ್‌ಟ್ಯಾಂಕ್/ ಪಿಟ್ಟುಗುಂಡಿಗಳಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುವಾಗ ಮೃತಪಟ್ಟ ಕಾರ್ಮಿಕರ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಕಾನೂನಾತ್ಮಕವಾಗಿ ಶಿಕ್ಷೆ ವಿಧಿಸಲು ಮತ್ತು ನ್ಯಾಯಾಲಯದಲ್ಲಿ ಪ್ರಕರಣಗಳನ್ನು ಹಿಂಬಾಲಿಸಲು ಹಾಗೂ ಎಂ.ಎಸ್.ಕಾಯ್ದೆ ಮತ್ತು ನಿಯಮ 2013ರ ಉಲ್ಲಂಘನೆಯಾಗಿ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಕಾನೂನಾತ್ಮಕವಾಗಿ ಇತ್ಯರ್ಥಗೊಳಿಸಲು ಆಯೋಗಕ್ಕೆ ಒಬ್ಬ ವಕೀಲರನ್ನು ನೇಮಿಸಿಕೊಳ್ಳಲು ಅತ್ಯವಶ್ಯಕವಾಗಿರುವುದರಿಂದ ಅನುಮೋದನೆ ನೀಡಲು ಆಯೋಗದ ಕಾರ್ಯದರ್ಶಿರವರು ಸಭೆಯನ್ನು ಕೋರಿದರು.

ಈ ಬಗ್ಗೆ ಚರ್ಚೆ ನಡೆದು, ರಾಜ್ಯದಲ್ಲಿ 19 ಪ್ರಕರಣಗಳು ಸುಮಾರು 20 ವರ್ಷ ಹಳೆಯದಾಗಿರುತ್ತವೆ. ಪೋಲೀಸ್ ಇಲಾಖೆಯಿಂದ ತನಿಖಾ ವರದಿ ನಿಗಧಿತ ಸಮಯದಲ್ಲಿ ಸಲ್ಲಿಸುತ್ತಿಲ್ಲವೆಂದು ತಿಳಿಸಿದರು. ಆಯೋಗದ ಅಧ್ಯಕ್ಷರು ಮಾತಾನಾಡುತ್ತಾ ಮೃತ ಕುಟುಂಬದ ಅವಲಂಬಿತರಿಗೆ ಒಂದು ಪ್ರಕರಣದಲ್ಲಿ ರೂ.4,12,500 ಗಳನ್ನು ಮಾತ್ರ ಪಾವತಿಸಿದ್ದು, ತನಿಖೆ ನಡೆಸುವಲ್ಲಿ ವಿಳಂಬವಾಗಿದ್ದು ತನಿಖಾ ವರದಿ ನೀಡದ ಕಾರಣಕ್ಕೆ ಉಳಿದ ಪರಿಹಾರ ಧನ ನೀಡಲು ಸಾಧ್ಯವಾಗಿರುವುದಿಲ್ಲ ಮತ್ತು ಒಬ್ಬ ಪಂಚಾಯಿತಿ ನೌಕರನ ಪ್ರಕರಣದಲ್ಲಿ 8 ತಿಂಗಳಿಂದ ತನಿಖೆ ನಡೆಸಿ ವರದಿ ನೀಡಿಲ್ಲದ ನ್ಯಾಯ ದೊರಕಿಸಿಕೊಡುವಲ್ಲಿ ವಿಳಂಬವಾಗಿರುವುದನ್ನು ಆಪಾದಿಸಿದರು.

ಎಸ್.ಸಿ.ಎಸ್.ಪಿ ನೋಡೆಲ್ ಅಧಿಕಾರಿಗಳು 19 ಪ್ರಕರಣಗಳ ವಿವರದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು. ಸದರಿ ಪಟ್ಟಿಯನ್ನು ಗೃಹ ಇಲಾಖೆಗೆ ಕಳುಹಿಸಲಾಗುವುದು ಎಂದು ತಿಳಿಸಿದರು.

**ತೀರ್ಮಾನ:**

1. ಮಾನ್ಯ ಸಭಾಧ್ಯಕ್ಷರಾದ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಆಯೋಗದಿಂದ ವಕೀಲರನ್ನು ನೇಮಿಸಿಕೊಳ್ಳಲು ಅಂಗೀಕರಿಸಿದರು.
2. 19 ಪ್ರಕರಣದ ವಿವರದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸುವುದು

**(ಕ್ರಮ:- ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಪೋಲೀಸ್ ಇಲಾಖೆ, ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ)**

**ವಿಷಯ:7 ಖಾಲಿ ಹುದ್ದೆಗಳ ಭರ್ತಿ:** ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಮಹಾನಗರ ಪಾಲಿಕೆಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ನೇರಪಾವತಿಯಡಿ ನೇಮಕ ಮಾಡಿಕೊಳ್ಳುವ ಕುರಿತು.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ/ ನೇರಪಾವತಿ/ ಖಾಲಿ ಇರುವ ಹುದ್ದೆಗಳ ವಿವರದೊಂದಿಗೆ ಒಟ್ಟು ಪೌರಕಾರ್ಮಿಕರ ಸಂಖ್ಯೆಯ ಅಂಕಿ ಅಂಶಗಳನ್ನು ಆಯೋಗದ ಕಾರ್ಯದರ್ಶಿಗಳು ತಿಳಿಸಿದರು.

ಆಯೋಗದ ಅಧ್ಯಕ್ಷರು ರವರು ನೇರಪಾವತಿಯಲ್ಲಿ 26,349 ಜನ ಇದ್ದು, 10,380 ಹುದ್ದೆ ಖಾಲಿ ಇರುತ್ತದೆ. ಸದರಿ ಖಾಲಿ ಇರುವ ಹುದ್ದೆಗಳಿಗೆ ಒಂದು ಅವಧಿಗೆ ವಿನಾಯಿತಿ ನೀಡಿ ಸದರಿ ಹುದ್ದೆಗಳಿಗೆ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವವರನ್ನು ಭರ್ತಿ ಮಾಡಿಕೊಳ್ಳುವಂತೆ ಕೋರಿದರು. ಜಂಟಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಮಾತನಾಡಿ ಈ ಕುರಿತು ಕರಡನ್ನು ತಯಾರಿಸಿದ್ದು ಸರ್ಕಾರದ ಅನುಮೋದನೆ ಪಡೆದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವುದಾಗಿ ತಿಳಿಸಿದರು, ಮಾನ್ಯ ಸಚಿವರು ಸರ್ಕಾರದ ಅನುಮೋದನೆ ಪಡೆಯುವ ಪ್ರಕ್ರಿಯೆ ಮುಗಿಸಿ 15 ದಿವಸದಲ್ಲಿ ಆದೇಶವನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಲು ಸೂಚಿಸಿದರು.

ಸದಸ್ಯರಾದ ಶ್ರೀಮತಿ.ಗೀತಾ ರಾಜು ವಾಡೇಕರ್ ರವರು ಕಲಬುರಗಿ, ಧಾರವಾಡ, ಹುಬ್ಬಳ್ಳಿಯಲ್ಲಿ ನೇಮಕಾತಿ ಕುರಿತು ಟೆಂಡರ್ ಪ್ರಕ್ರಿಯೆಯಲ್ಲಿದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ: ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ)**

**ವಿಷಯ: 8 ಯು.ಜಿ.ಡಿ ಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ:** ರಾಜ್ಯದ 10 ಮಹಾನಗರ ಪಾಲಿಕೆಗಳ ಯು.ಜಿ.ಡಿಯಲ್ಲಿ ಕಾರ್ಯನಿರ್ವಸುತ್ತಿರುವ 544 ಪೌರಕಾರ್ಮಿಕರನ್ನು ಖಾಯಂಗೊಳಿಸುವ ಪ್ರಸ್ತಾವನೆಯನ್ನು ಸರ್ಕಾರದಿಂದ ಕಡತ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿರುತ್ತದೆ ಎಂದು ಜಂಟಿ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ತಿಳಿಸಿದರು.

ಕನಿಷ್ಠ ವೇತನ ಮಂಡಳಿಯು ಸುಮಾರು 5 ವರ್ಷಗಳಿಂದ ಕನಿಷ್ಠ ವೇತನವನ್ನು ಪರಿಷ್ಕರಿಸಿರುವುದಿಲ್ಲ. ಇದರಿಂದಾಗಿ ಪೌರಕಾರ್ಮಿಕರಿಗೆ ರೂ.12,000/- ವೇತನ ದೊರೆಯುತ್ತಿದ್ದು ಜೀವನ ನಿರ್ವಹಣೆಯು ಕಷ್ಟಕರವಾಗಿರುತ್ತದೆ. ಕನಿಷ್ಟ ವೇತನ ರೂ.25,000/- ನಿಗದಿಗೊಳಸಬೇಕೆಂದು ಮಾನ್ಯ ಅಯೋಗದ ಅಧ್ಯಕ್ಷರು ಸಭಾ ಅಧ್ಯಕ್ಷರಿಗೆ ವಿವರಿಸಿದರು.

ತೀರ್ಮಾನ:

1. ಹಾಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ಭರ್ತಿಮಾಡಲು 15 ದಿನಗಳೊಳಗಾಗಿ ಪ್ರಸ್ತಾವನೆಯನ್ನು ಸಿದ್ದಪಡಿಸುವುದು.
2. ಕಲಬುರಗಿ, ಮಂಗಳೂರು ಮಹಾನಗರ ಪಾಲಿಕೆಗಳಲ್ಲಿ ಈ ಕೂಡಲೇ ಗುತ್ತಿಗೆ ಪದ್ಧತಿಯನ್ನು ನೇರಪಾವತಿ ಅಡಿಯಲ್ಲಿ ನೇಮಿಸಿಕೊಳ್ಳಲು 1 ತಿಂಗಳೊಳಗಾಗಿ ಕ್ರಮ ವಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.
3. ಕನಿಷ್ಟ ವೇತನ ಮಂಡಳಿಯು ಈ ಕೂಡಲೇ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಪರಿಷ್ಕರಿಸಲು ಕ್ರಮವಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.

**(ಕ್ರಮ:- ಸರ್ಕಾರದ ಅಪರ/ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ/ಗ್ರಾಮೀಣಾಭಿವೃದ್ಧಿ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ)**

**ವಿಷಯ:9 ಬಿಬಿಎಂಪಿ ಸುತ್ತೋಲೆಯನ್ನು ನಗರ ಸ್ಥಳೀಯ ಸಂಸ್ಥೆಯ ನೇರಪಾವತಿ ಪೌರಕಾರ್ಮಿಕರಿಗೆ ವಿಸ್ತರಿಸುವ ಬಗ್ಗೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರ ಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಅಪಘಾತ, ಮಾರಣಾಂತಿಕ ಖಾಯಿಲೆ, ಸ್ವಚ್ಛತಾ ಕೆಲಸದ ನಿರ್ವಹಣೆಯಿಂದ ಬರುವ ಇತರ ಖಾಯಿಲೆಗಳಿಂದ ಸಹಜವಾಗಿ ಮೃತಪಟ್ಟಲ್ಲಿ ಅವಲಂಭಿತರನ್ನು ನೇರಸಂಭಾವನೆ ಪಾವತಿಯಡಿ ನಿಯೋಜಿಸಿಕೊಳ್ಳುವುದು ಅಥವಾ ರೂ.10.00 ಲಕ್ಷಗಳ ಒಂದು ಬಾರಿ ಹಿಡಿಗಂಟು ಮೃತರ ಅವಲಂಭಿತರಿಗೆ ಪಾವತಿಸಲಾಗುತ್ತಿರುತ್ತದೆ. ಸದರಿ ಸೌಲಭ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಾತ್ರ ಸೀಮಿತಗೊಳಿಸದೆ ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೂ ವಿಸ್ತರಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಗೆ ನಿರ್ದೇಶನ ನೀಡುವಂತೆ ಕೋರಿದರು.

ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರು ಇತರ ನಗರ ಸ್ಥಳಿಯ ಸಂಸ್ಥೆಗಳಲ್ಲಿ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೂ ಈ ಸೌಲಭ್ಯ ಒದಗಿಸಲು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ತಿಳಿಸಿದರು.

**ತೀರ್ಮಾನ:**

ಮಾನ್ಯ ಸಚಿವರು ಈ ಕೂಡಲೇ ಬಿ.ಬಿ.ಎಂ.ಪಿ ಮಾದರಿಯಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲೂ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಸೌಲಭ್ಯಗಳನ್ನು ಕಲ್ಪಿಸಲು ಪೌರಾಡಳಿತ ನಿರ್ದೇಶನಾಲಯದಿಂದ 15 ದಿನಗಳ ಒಳಗಾಗಿ ಆದೇಶ ಹೊರಡಿಸಲು ಸೂಚಿಸಿದರು.

**(ಕ್ರಮ:- ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ)**

**<u>ವಿಷಯ:10 ಸಂಕಷ್ಟ ಭತ್ಯೆ ಯುಜಿಡಿ ಕಾರ್ಮಿಕರಿಗೂ ವಿಸ್ತರಿಸುವ ಬಗ್ಗೆ:</u>** ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿರುವಂತೆ ರೂ.2000/-ಸಂಕಷ್ಟ ಭತ್ಯೆಯನ್ನು ಪೌರಕಾರ್ಮಿಕರಿಗೆ ಮಾತ್ರ ನೀಡುತ್ತಿದ್ದು ಅದರಂತೆ ಯು.ಜಿ.ಡಿ ಕಾರ್ಮಿಕರಿಗೂ ಸಹ ವಿಸ್ತರಿಸುವ ಕುರಿತು ಪೌರಾಡಳಿತ ನಿರ್ದೇಶಕರಿಗೆ ಆದೇಶ ಹೊರಡಿಸಲು ನಿರ್ದೇಶನ ನೀಡಲು ಆಯೋಗದ ಅಧ್ಯಕ್ಷರು ಕೋರಿದರು.

ಎಸ್.ಸಿ.ಎಸ್.ಪಿ ನೋಡೆಲ್ ಅಧಿಕಾರಿಗಳು ಮಾತನಾಡಿ ಅನೈರ್ಮಲ್ಯ ವೃತ್ತಿಯನ್ನು ಯಾರು ಮಾಡುತ್ತಿರುತ್ತಾರೆ ಅಂತಹವರನ್ನು ಸಫಾಯಿ ಕರ್ಮಚಾರಿಗಳು ಎಂದು ವ್ಯಾಖ್ಯಾನ ಮಾಡಲಾಗಿರುತ್ತದೆ ಎಂದು ತಿಳಿಸಿದರು.

**ತೀರ್ಮಾನ:**

ಮಾನ್ಯ ಸಭಾಧ್ಯಕ್ಷರು ಪೌರಾಡಳಿತ ನಿರ್ದೇಶನಾಲಯದಿಂದ ಯು.ಜಿ.ಡಿ ಕಾರ್ಮಿಕರಿಗೂ ಸಂಕಷ್ಟ ಭತ್ಯೆಯನ್ನು ವಿಸ್ತರಿಸಲು ಆದೇಶ ಹೊರಡಿಸಲು ಸೂಚಿಸಿದರು.

**(ಕ್ರಮ:- ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ)**

**<u>ವಿಷಯ:11 ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ಇನ್ನಿತರೆ ವಿಷಯಗಳು:</u>**

**a. ಸಕ್ಕಿಂಗ್ ಜೆಟ್ಟಿಂಗ್ ಯಂತ್ರಗಳ ಖರೀದಿ, ರಿಪೇರಿ ಮತ್ತು ಕೆಟ್ಟು ಹೋಗಿರುವ ಯಂತ್ರಗಳ ಬಗ್ಗೆ.**

ಆಯೋಗದ ಅಧ್ಯಕ್ಷರು ಮಾತನಾಡಿ ಹಲವು ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳು ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸದೆ ಇರುವುದು ಕಂಡು ಬಂದಿರುತ್ತದೆ. ಇದರ ಬದಲಾಗಿ ಖಾಸಗೀಯವರಿಂದ ಯಂತ್ರಗಳನ್ನು ಪಡೆದು ದುಬಾರಿ ಹಣವನ್ನು ನಿಗದಿ ಮಾಡಿ ಸಕ್ಕಿಂಗ್ ಕೆಲಸವನ್ನು ನಿರ್ವಹಿಸುತ್ತಿರುತ್ತಾರೆ. ಇದರಿಂದಾಗಿ ಬಹಳಷ್ಟು ಸಾರ್ವಜನಿಕರು ಹಣವನ್ನು ಭರಿಸಲಾಗದೇ ಖಾಸಗೀ ವ್ಯಕ್ತಿಗಳಿಗೆ ಸ್ವಚ್ಛಗೊಳಿಸಲು ನೀಡುತ್ತಿರುತ್ತಾರೆ ಎಂದು ವಿವರಿಸಿದರು.

**ಪೌರಾಡಳಿತ ನಿರ್ದೇಶನಾಲಯ: 312 ನಗರಸ್ಥಳೀಯ ಸಂಸ್ಥೆಗಳಲ್ಲಿರುವ ಯಂತ್ರಗಳ ವಿವರ**

178 ಸಕ್ಷನ್ ಯಂತ್ರ,
62 ಜೆಟ್ಟಿಂಗ್ ಯಂತ್ರ,
157 ಸಕ್ಷನ್ ಹಾಗೂ ಜೆಟ್ಟಿಂಗ್ ಯಂತ್ರ,
52 ಡೀಸಿಲ್ಟಿಂಗ್ ಯಂತ್ರ
ಇತರೆ 27 ಯಂತ್ರಗಳಿರುತ್ತದೆ.

**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:** 139 ಜೆಟ್ಟಿಂಗ್ ಯಂತ್ರ, 135 ಸಕ್ಷನ್ ಹಾಗೂ ಜೆಟ್ಟಿಂಗ್ ಯಂತ್ರ, 40 ಡೀಸಿಲ್ಟಿಂಗ್ ಯಂತ್ರ, 15 ರೀ ಸಕ್ಕಿಂಗ್ ಯಂತ್ರಗಳಿದ್ದು, ಪ್ರತಿ ವಾರ್ಡ್ ಕವರ್ ಆಗಿರುತ್ತದೆ. ಕೆಟ್ಟು ಹೋಗಿರುವ ಯಂತ್ರಗಳನ್ನು ರಿಪೇರಿ ಮಾಡಿಸಲಾಗಿರುತ್ತದೆ. 20 ಡೀಸಿಲ್ಟಿಂಗ್ ಯಂತ್ರ ಖರೀದಿ ಮಾಡಲು ಆದೇಶ ಆಗಿರುವುದಾಗಿ ಇಲಾಖಾಧಿಕಾರಿಗಳು ಸಭೆಗೆ ವಿವರಿಸಿದರು.

ತೀರ್ಮಾನ:

1. ಮಾನ್ಯ ಸಚಿವರು ಸರ್ಕಾರದಿಂದ ಖರೀದಿಸಲಾಗಿರುವ ಸಕ್ಕಿಂಗ್, ಜೆಟ್ಟಿಂಗ್ ಮತ್ತು ಡೀಸಾಲ್ಟಿಂಗ್ ಯಂತ್ರಗಳಲ್ಲಿ ಕೆಟ್ಟು ಹೋಗಿರುವ ಯಂತ್ರಗಳನ್ನು ರಿಪೇರಿ ಮಾಡಿಸಿ, ಕೂಡಲೇ ಸರಿಪಡಿಸುವುದು. ಯಂತ್ರಗಳಿಗೆ ಪ್ರತ್ಯೇಕವಾಗಿ ರಿಪೇರಿಯ ಹಣವನ್ನು ಭರಿಸಲು ನಿಗದಿಪಡಿಸಿಕೊಳ್ಳುವುದು.

2. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡಲು ಕ್ರಮ ವಹಿಸುವುದು ಹಾಗೂ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ತಾಲ್ಲೂಕಿಗೆ ಒಂದು ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರವನ್ನು ಖರೀದಿ ಮಾಡಲು ಕ್ರಮವಹಿಸುವುದು.

3. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಸಗಿ ಸಕ್ಕಿಂಗ್, ಜೆಟ್ಟಿಂಗ್ ಯಂತ್ರಗಳನ್ನು ಕಡ್ಡಾಯವಾಗಿ ನೊಂದಣಿ ಮಾಡಿಕೊಳ್ಳುವುದು ಹಾಗೂ ಎಲ್ಲಾ ಕಾರ್ಮಿಕರಿಗೂ ತರಬೇತಿ ನೀಡಿ ಸಕ್ಕಿಂಗ್, ಜೆಟ್ಟಿಂಗ್ ಯಂತ್ರಕ್ಕೆ ತಗುಲುವ ವೆಚ್ಚವನ್ನು ಸರ್ಕಾರದಿಂದಲೇ ನಿಗದಿಗೊಳಿಸುವುದು. ಒಂದು ವೇಳೆ ಸರ್ಕಾರವು ನಿಗದಿ ಪಡಿಸಿದ ಮೊತ್ತಕ್ಕಿಂತ ಹೆಚ್ಚುವರಿ ಪಡೆದಲ್ಲಿ ಅಂತಹ ಲೈಸನ್ಸ್ ಅನ್ನು ರದ್ದುಗೊಳಿಸಲು ಕ್ರಮಕೈಗೊಳ್ಳುವುದು.

**(ಕ್ರಮ:- ಸರ್ಕಾರದ ಅಪರ/ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ/ಗ್ರಾಮೀಣಾಭಿವೃದ್ಧಿ, ಆಯುಕ್ತರು, ಬಿ.ಬಿ.ಎಂ.ಪಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ,)**

**b. FSTP & STP ವಿವರ:** ಹಿಂದಿನ ಸಭಾ ನಡವಳಿಗಳಲ್ಲಿನ ನಿರ್ದೇಶನದಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಫೀಕಲ್ ಸ್ಲಡ್ಜ್ ಮ್ಯಾನೇಜ್‌ಮೆಂಟ್ (FSTP) ಮತ್ತು STP ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣ ಮಾಡಿರುವ ಬಗ್ಗೆ ವಿವರ.

**ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ**

ಒಳಚರಂಡಿ ವ್ಯವಸ್ಥೆ ಹೊಂದಿರದ ನಗರಗಳಲ್ಲಿ ಮಾನವ ತ್ಯಾಜ್ಯ ಕಲ್ಮಷಗಳನ್ನು ಸಂಸ್ಕರಿಸುವ ಘಟಕಗಳನ್ನು ವಿಕೇಂದ್ರೀಕರಣ ವ್ಯವಸ್ಥೆಯಡಿ ತುರ್ತು ಹಾಗೂ ಮಧ್ಯಂತರ ಪರಿಹಾರವಾಗಿ ಸ್ಥಾಪಿಸಲಾಗುತ್ತಿದೆ. ಮೊದಲನೇ ಹಂತದ ಕಾರ್ಯಕ್ರಮದಲ್ಲಿ ಆಯ್ಕೆಯಾದ 45 ನಗರ ಸ್ಥಳೀಯ ಸಂಸ್ಥೆಗಳ ಪೈಕಿ, 3 ಘಟಕ ನಿರ್ಮಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. 22 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಟೆಂಡರ್ ಮೌಲ್ಯಮಾಪನ ಹಂತದಲ್ಲಿರುತ್ತದೆ. 20 ನಗರಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಎಸ್.ಆರ್ ದರಗಳಿಗೆ ಅಂದಾಜು ಪಟ್ಟಿ ಪರಿಷ್ಕರಣೆ ಹಂತದಲ್ಲಿರುತ್ತದೆ ಎಂದು ತಿಳಿಸಿದರು.

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಶೌಚ ಗುಂಡಿ ಅಥವಾ ಸೆಪ್ಟಿಕ್ ಟ್ಯಾಂಕ್ ತುಂಬಿದ ನಂತರ ಮಲ ತ್ಯಾಜ್ಯವನ್ನು ಉತ್ತಮ ಅನುಭವ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು Faecal Sludge Management (FSM) 17 ಘಟಕಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಉಡುಪಿ-2, ಬಳ್ಳಾರಿ-1, ಚಿಕ್ಕಮಗಳೂರು -1, ಬೆಂಗಳೂರು ನಗರ -1 ಕೊಡಗು -1, ಕಲಬುರಗಿ-1 ಒಟ್ಟಾರೆ 7 FSM ಘಟಕಗಳು ಪೂರ್ಣಗೊಂಡಿರುತ್ತವೆ. ಉಳಿದ 10 FSM ಘಟಕಗಳ ಕಾಮಗಾರಿ ಪ್ರಗತಿಯಲ್ಲಿರುತ್ತವೆ ಎಂದು ತಿಳಿಸಿದರು

**<u>ತೀರ್ಮಾನ:</u>**

ಬಹಳಷ್ಟು ಕಡೆ ಮಲ ಮೂತ್ರಗಳನ್ನು ಸಕ್ಕಿಂಗ್ ಯಂತ್ರಗಳಿಂದ ಸಂಗ್ರಹಣೆ ಮಾಡಿ ನಗರದ ಹೊರ ಪ್ರದೇಶಗಳಲ್ಲಿ ವಿಸರ್ಜನೆ ಮಾಡುತ್ತಿರುತ್ತಾರೆ. ಇದರಿಂದ ಆ ಪ್ರದೇಶವು ಬಹಳಷ್ಟು ಕಲ್ಮಷಗೊಳ್ಳುತ್ತಿರುತ್ತದೆ. ಕೇಂದ್ರ ಸರ್ಕಾರವು ಬಹಳಷ್ಟು ಯೋಜನೆಗಳನ್ನು ರೂಪಿಸಿರುತ್ತದೆ. ಈ ಕೂಡಲೇ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಎಸ್.ಟಿ.ಪಿ/ಎಫ್.ಎಸ್.ಟಿ.ಪಿ/ಎಫ್.ಎಸ್.ಎಮ್ ಘಟಕಗಳನ್ನು ತುರ್ತಾಗಿ ನಿರ್ಮಾಣ ಮಾಡಲು ಕ್ರಮವಹಿಸುವುದು.

**(ಕ್ರಮ:- ಸರ್ಕಾರದ ಅಪರ/ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ/ಗ್ರಾಮೀಣಾಭಿವೃದ್ಧಿ,, ಆಯುಕ್ತರು, ಬಿ.ಬಿ.ಎಂ.ಪಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ,)**

**c. ಕೋವಿಡ್ ಪರಿಹಾರ:**

1. ಕೋವಿಡ್-19 ಖಾಯಿಲೆಯಿಂದ ಮೃತಪಟ್ಟ ನೇರಪಾವತಿ ಪೌರಕಾರ್ಮಿಕರಾದ ದಿ॥ಗಂಗಾಧರ್ ಕೋಲಾರ ಜಿಲ್ಲೆ ರವರಿಗೆ ರೂ.30.00 ಲಕ್ಷಗಳ ಪರಿಹಾರಧನವನ್ನು ವಿತರಿಸಲಾಗಿರುತ್ತದೆ ಎಂದು ತಿಳಿಸಿದರು.

2. ಕೋವಿಡ್-19 ಖಾಯಿಲೆಯಿಂದ ಮೃತಪಟ್ಟ ನೇರಪಾವತಿ ಪೌರಕಾರ್ಮಿಕರಾದ ದಿ॥ಆರ್.ನಾಗರಾಜ್ ಬಿನ್ ಲೇಟ್ ರಾಮು (ಹಾಸನ ಜಿಲ್ಲೆ) ರವರಿಗೆ ಸಂಬಂಧಿಸಿದಂತೆ ರೂ.30.00 ಲಕ್ಷ ಪರಿಹಾರಧನ ನೀಡಲು ಆದೇಶವಾಗಿದ್ದು, ಸ್ಥಳೀಯ ನಿಧಿಯಿಂದ ಕೊಡಬೇಕಾಗಿರುವುದರಿಂದ ಕ್ರೂಢೀಕರಣ ಆದ ನಂತರ ನೀಡಲಾಗುವುದು ಎಂದು ಸಭೆಗೆ ಇಲಾಖೆ ಅಧಿಕಾರಿಗಳು ತಿಳಿಸಲಾಯಿತು.

ಮಾನ್ಯ ಸಭಾಧ್ಯಕ್ಷರು ಸಂತ್ರಸ್ಥರಿಗೆ ಪರಿಹಾರಧನವನ್ನು ಮರುಹೊಂದಾಣಿಕೆ ಮಾಡಿ ಮಂಜೂರು ಮಾಡಲು ನಿರ್ದೇಶನ ನೀಡುವಂತೆ ನಗರಾವೃದ್ಧಿ ಇಲಾಖೆಯವರಿಗೆ ತಿಳಿಸಿದರು.

**ತೀರ್ಮಾನ:**

ಹಿಂದಿನ ಸಭಾ ನಡವಳಿ ಮೇಲೆ ತೀರ್ಮಾನಗಳನ್ನು ಪರಿಶೀಲಿಸಲಾಗಿ, ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿದೆ ಮತ್ತು ನಿರ್ದೇಶನ ನೀಡಲಾಗಿದೆ ಎಂಬ ಉತ್ತರಗಳನ್ನು ಅನುಪಾಲನಾ ವರದಿಯಲ್ಲಿ ಸಲ್ಲಿಸಿರುತ್ತೀರಿ. ಆದರೆ, ಸದರಿ ಸಮಸ್ಯೆಗಳನ್ನು ಪರಿಹರಿಸಿರುವುದಿಲ್ಲ ಸಂಬಂಧಪಟ್ಟಂತಹ ಇಲಾಖಾ ಮುಖ್ಯಸ್ಥರು ಹಿಂದಿನ ಸಭೆಯಲ್ಲಿ ತಿಳಿಸಲಾದಂತಹ ತೀರ್ಮಾನಗಳ ಮೇಲೆ ಸೂಕ್ತ ಕ್ರಮಕೈಗೊಂಡು ಅಗತ್ಯವಾದ ವಿವರಗಳ ದಾಖಲಾತಿಗಳನ್ನು ಒಂದು ತಿಂಗಳೊಳಗಾಗಿ ಸಲ್ಲಿಸಲು ಸೂಚಿಸಲಾಯಿತು.

ಮಾನ್ಯ ಸಚಿವರು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರು ಸಕ್ಕಿಂಗ್ ಜೆಟ್ಟಿಂಗ್ ಯಂತ್ರಗಳ ಖರೀದಿ, ರಿಪೇರಿ ಮತ್ತು ಕೆಟ್ಟು ಹೋಗಿರುವ ಯಂತ್ರಗಳ ವಿವರದ ಅಂಶಗಳ ಕುರಿತು ಮುಂದಿನ ದಿನಗಳಲ್ಲಿ ನಡೆಸಲಾಗುವ ವಿಡಿಯೋ ಕಾನ್ಫರೆನ್ಸ್ ಸಭೆಯ ವಿಷಯ ಸೂಚಿಯಲ್ಲಿ ನಮೂದಿಸುವುದು, ಅನೈರ್ಮಲ್ಯ ವೃತ್ತಿಯ ಎಲ್ಲಾ ಕೆಲಸವನ್ನು ಯಂತ್ರೋಪಕರಣಗಳ ಮೂಲಕ ಮಾಡುವುದರಿಂದ ಕರ್ನಾಟಕದಲ್ಲಿ ಮಾನ್ಯುಯಲ್ ಸ್ಕ್ಯಾವೆಂಜಿಂಗ್ ಸಂಪೂರ್ಣವಾಗಿ ಅಂತ್ಯಗೊಳಿಸುವುದು ಸರ್ಕಾರದ ಮೂಲ ಉದ್ದೇಶವಾಗಿರುತ್ತದೆ.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಕೋಟ ಶ್ರೀನಿವಾಸ ಪೂಜಾರಿ),
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಇಲಾಖೆ ಹಾಗೂ
ಅಧ್ಯಕ್ಷರು, ರಾಜ್ಯ ಮೇಲ್ವಿಚಾರಣಾ ಸಮಿತಿ.